63

# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| 1)ಶ್ರೀ ನಿಟ್ರವಟ್ಟಿ ಗಾದಿಲಿಂಗಪ್ಪ ತಂದೆ ಪಕ್ಕೀರಪ್ಪ<br>2)ಅಗಸರ ನಾಗರಾಜ ತಂದೆ ಅ.ಜಡೇಪ್ಪ | ಕಂದಾಯ ನಿರೀಕ್ಷಕರು, ಕೋಳೂರು |

ವಿಷಯ:ಬಳ್ಳಾರಿ ತಾಲೂಕು ಕೋಳೂರು ಹೋಬಳಿ ಹಂದಿಹಾಳು ಗ್ರಾಮದ ಸರ್ವೆ ನಂ:104ಸಿ ವಿಸ್ತೀರ್ಣ:6.65 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು

******

ಪ್ರಸ್ತಾವನೆ,

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿ ಹಂದಿಹಾಳು ಗ್ರಾಮದ ಸರ್ವೆ ನಂ:104ಸಿ ವಿಸ್ತೀರ್ಣ:6.65 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀ ನಿಟ್ರವಟ್ಟಿ ಗಾದಿಲಿಂಗಪ್ಪ ತಂದೆ ಪಕ್ಕೀರಪ್ಪ ಇವರು ಶ್ರೀ ಅಗಸರ ನಾಗರಾಜ ತಂದೆ ಅಗಸರ ಜಡೇಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ. ಅದರಂತೆ ಖರೀದಿದಾರರು ಹಕ್ಕುಬದಲಾವಣೆ ಮಾಡಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು, ಕೋಳೂರು ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿ ಮಾಡಲಾಗಿರುತ್ತದೆ ನಿಗದಿತ ಅವದಿಯಲ್ಲಿ ಯಾವುದೇ ಆಕ್ಷೇಪಣೆ/ಅಭ್ಯಂತರಗಳು ಬಂದಿರುವುದಿಲ್ಲ ಆದರೆ ಪಿ.ಟಿ.ಸಿ.ಎಲ್ ಕಾಯ್ದೆ ಉಲ್ಲಂಘನೆಯಾಗಿರುವುದರಿಂದ ಸದ್ರಿ ಹಕ್ಕುಬದಲಾವಣೆ ಕಡತವನ್ನು ತಿರಸ್ಕರಿಸಿ ವಿಚಾರಣೆನಡೆಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:13-10-2014, 22-12-2014, ಮತ್ತು 08-12-2015ರಂದು ವಿಚಾರಣೆ ನಡೆಸಲಾಗಿ ಸದ್ರಿ ಜಮೀನಿಗೆ ಸಂಬಂಧಿಸಿದಂತೆ ಪಿ.ಟಿ.ಸಿ.ಎಲ್ ಕಾಯ್ದೆ ಉಲಂಘನೆಯಾಗಿರುವುದರಿಂದ ಈಕೆಳಗಿನಂತೆ ಆದೇಶ.

## -::ಆದೇಶ::-

ಸಂ/ಕಂ/ವಿವಾದ/35/2015-16 ದಿನಾಂಕ: 6/6/2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿ ಹಂದಿಹಾಳು ಗ್ರಾಮದ ಸರ್ವೆ ನಂ:104ಸಿ ವಿಸ್ತೀರ್ಣ:6.65 ಎಕರೆ ಜಮೀನು ಪಿ.ಟಿ.ಸಿ.ಎಲ್ ಕಾಯ್ದೆ ಉಲ್ಲಂಘನೆಯಾಗಿರುವುದರಿಂದ ಈ ಪ್ರಕರಣವನ್ನು ಮಾನ್ಯ ಸಹಾಯಕ ಆಯುಕ್ತರು, ಬಳ್ಳಾರಿ ನಾಯ್ಯಾಲಯದಲ್ಲಿ ವಿಚಾರಣೆಯನ್ನು ಕಂಡುಕೊಳ್ಳಲು ಸದ್ರಿ ಕಡತವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಿ ಆದೇಶಿಸಲಾಗಿದೆ

ಈ ಆದೇಶವು ಇಂದು ದಿನಾಂಕ:6.6.2016ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು, ಬಳ್ಳಾರಿ
Tasildar, Bellary.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ.